ನೆರವಾದರು. ಕಿಕುಯಿ ಬುಡಕಟ್ಟಿನವರು ಬ್ರಿಟಿಷರ ವಿರುದ್ಧ ನಡೆಸುತ್ತಿದ್ದ ಗೆರಿಲ್ಲಾ ಯುದ್ಧದ (ಅದಕ್ಕೆ ಮೌಮೌ ಎಂದು ಹೆಸರು) ಕ್ರಾಂತಿಕಾರಿಗಳಿಗೆ ನಮ್ಮನೆ ಅಡಗುದಾಣ. ಒಮ್ಮೆ ಬ್ರಿಟಿಷ್ ಸರ್ಕಾರ ನಮ್ಮನೆಯನ್ನು ರೈಡ್ ಮಾಡಿತು. ಮನೆಯಲ್ಲಿದ್ದ ಕ್ರಾಂತಿಕಾರಿ ಮ್ವಾಂಗಿಯನ್ನು ಪೊಲೀಸರು ಎಳೆದುಕೊಂಡು ಹೋದರು. ಆಗ ಹೋದ ಮ್ವಾಂಗಿ ಮತ್ತೆ ಬರಲಿಲ್ಲ. ಬ್ರಿಟಿಷ್-ಚೈನಾ ಯುದ್ಧದ ಸಮಯದಲ್ಲಿ ತಂದೆಯವರು ತಮ್ಮ ಲೇಖನದಲ್ಲಿ ಒಂದು ಪ್ರಶ್ನೆ ಎತ್ತಿದರು: 'ಬ್ರಿಟಿಷರೆ, ಆಫ್ರಿಕನ್ನರನ್ನು ನಿಮ್ಮ ಸೈನ್ಯಕ್ಕೆ ಸೇರಿಸಿಕೊಂಡಿದ್ದೀರಿ. ಅವರಿಗೆ ಅವರ ದೇಶದಲ್ಲೇ ಸ್ವಾತಂತ್ರ್ಯವಿಲ್ಲ. ಹೀಗಿರುತ್ತ ಅವರನ್ನು ಬರ್ಮಾಕ್ಕೆ ಹೋಗಿ ಯುದ್ಧ ಮಾಡಿ ಎಂದು ಹೇಳುವುದಕ್ಕೆ ನಿಮಗೆ ಯಾವ ನೈತಿಕತೆ ಇದೆ?' ತಂದೆಯವರ ಮೇಲೆ ಇಂಗ್ಲೆಂಡಿನ ಅರಸೊತ್ತಿಗೆ ವಿರುದ್ಧ ಲೇಖನ ಬರೆದಿದ್ದಕ್ಕೆ ದೇಶದ್ರೋಹದ ಕೇಸು ಹಾಕಲಾಯಿತು. ಜೈಲಲ್ಲಿದ್ದರು. ಆಫ್ರಿಕನ್ ಹೋರಾಟಗಾರರಾದ ಜೊಮೊ ಕೆನ್ಯಾಟ,



ಹೋರಾಟಗಾರ ಕೆನ್ಯಾಟ ತಮ್ಮ ಪಕ್ಷದ ನಾಯಕರೊಂದಿಗೆ

ಟಾಂ ಮ್ಬೋಯಾ, ಅಚೆಂಗ್ ಒನೆಕೊ, ಡೇನಿಯಲ್ ಅರಾಪ್ ಮೊಯಿ, ಡಾ. ಕಿಯಾನೊ ನಮ್ಮ ಪ್ರೆಸ್ಸಿಗೆ ಬರುತ್ತಿದ್ದರು. ತಮ್ಮ ಹೋರಾಟದ ಬಗ್ಗೆ ಲೇಖನ ಪ್ರಕಟಿಸಲು ವಿನಂತಿಸುತ್ತಿದ್ದರು. 1963ರಲ್ಲಿ ಕೀನ್ಯಾ ಸ್ವತಂತ್ರವಾಯಿತು. ಕೆನ್ಯಾಟ ಪ್ರಥಮ ಅಧ್ಯಕ್ಷರಾದರು.

**◆ ಕೀನ್ಯಾ ಬಹುಭಾಷೆಗಳ ದೇಶ. ನಿಮಗೆ ಎಷ್ಟು ಭಾಷೆ ಬರುತ್ತವೆ?**

ಭಾರತೀಯ ಮೂಲದ ಎಲ್ಲರೂ ನಾಲ್ಕೈದು ಭಾಷೆಗಳನ್ನು ಆಡುವರು. ಅಲ್ಲಿನ ಮುಖ್ಯ ಭಾಷೆ ಸ್ವಾಹಿಲಿ. ಆದರೆ ಬಹುತೇಕ ಶಿಕ್ಷಣ ಮತ್ತು ಆಡಳಿತ ಇಂಗ್ಲಿಷಿನಲ್ಲಿ. ಸ್ವಾಹಿಲಿ ಎಂದರೆ ಕರಾವಳಿ ಭಾಷೆ ಎಂದರ್ಥ. ಪೋರ್ಚುಗೀಸ್, ಹಿಂದಿ, ಅರಬ್ಬಿ, ಇಂಗ್ಲಿಷ್ ಪದಗಳು ಅದರಲ್ಲಿವೆ. (ತಮ್ಮೆದುರಿನ ಮೇಜನ್ನು ತೋರಿಸುತ್ತ) ಸ್ವಾಹಿಲಿಯಲ್ಲಿ ಇದಕ್ಕೆ ಮೇಝಾ ಎನ್ನುವರು. ಕೀನ್ಯಾದ ರಾಜಕೀಯ ನಾಯಕರ ಜತೆ ನಾವೆಲ್ಲ ಸ್ವಾಹಿಲಿಯಲ್ಲೇ ಮಾತಾಡುತ್ತೇವೆ. ನಾನೊಂದು ರಾಜಕೀಯ ಸಭೆಗೆ ವರದಿಗಾರನಾಗಿ ಹೋಗಿದ್ದೆ. ಸಭೆ ಮುಗಿದು ಕೆನ್ಯಾಟ ಒಂದೆಡೆ ಕೂತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ನಾನು ಹೋಗಿ ನಮಸ್ಕರಿಸಿ 'ಯುವರ್ ಎಕ್ಸಲನ್ಸಿ, ಪತ್ರಕರ್ತರು ನಿಮ್ಮ ಜತೆ ಗ್ರೂಪ್ ಫೋಟೊ ತೆಗೆದುಕೊಳ್ಳಬೇಕೆಂದು ಬಯಸಿದ್ದಾರೆ' ಎಂದು ಸ್ವಾಹಿಲಿಯಲ್ಲಿ ಕೇಳಿದೆ. ಅವರು 'ವೇವೆ ನೀ ನಾನಿ?' (ನೀನ್ಯಾರು?) ಎಂದರು. 'ಜಿನಾ ಯಾಂಗೊ ಅನಿಲ್ ವಿದ್ಯಾರ್ಥಿ' (ನಾನು ಅನಿಲ್) ಎಂದೆ. 'ವೆವೆ ನೀಕಿ ಜಾನ, ಯಾ ಚಘಾಜಿ ಒಕೊಲನಿ ಟೈಮ್ಸ್?' (ನೀನು ತಾನೇ ಆ ತರುಣ, ಕಾಲನಿ ಟೈಮ್ಸ್ ಪ್ರಿಂಟ್ ಮಾಡುವವನ ಮಗ?)' ಎಂದರು. ಹೌದೆಂದೆ. ನಾವೆಲ್ಲ ಅವರ ಜತೆ ನಿಂತು ಪಟ ತೆಗೆಸಿಕೊಂಡೆವು.

**◆ ಕೀನ್ಯಾದಲ್ಲಿ ಭಾರತೀಯ ಮತ್ತು ಆಫ್ರಿಕನ್ ಸಂಸ್ಕೃತಿಗಳು ಹೇಗೆ ಬೆರೆತಿವೆ?**

ಏನೂ ಇಲ್ಲ. ಅಲ್ಲಿನ ಭಾರತೀಯ ಸಮುದಾಯದವರು ತಮ್ಮಷ್ಟಕ್ಕೆ ತಾವು ಇರಬಯಸುವವರು. ಈಗಲೂ ಆಫ್ರಿಕನ್ನರ ಕುರಿತು ಅವರಲ್ಲಿ ವರ್ಣಭೇದ ಭಾವನೆಯೇ ಇದೆ. ತಮ್ಮ ಮಾತುಕತೆಯಲ್ಲಿ 'ಏ ವೊ ಸಾಲಾ ಕಾಲಾ' ಎಂದು ತುಚ್ಛವಾಗಿ ಮಾತಾಡುತ್ತಾರೆ. ಆಗೆಲ್ಲ